ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ- 12 / ಪಿ.ಡಬ್ಲ್ಯೂ- 06

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.

ಸಾಕ್ಷಿಯನ್ನು ದಿನಾಂಕ 10-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಕರಿಯಪ್ಪ |
| ತಂದೆಯ ಹೆಸರು - | ಯಮನೂರಪ್ಪ |
| ವಯಸ್ಸು - | 35 ವರ್ಷಗಳು |
| ಉದ್ಯೋಗ - | ಚಾಲಕ |
| ವಾಸಸ್ಥಳ - | ಶಿವಪುರ ಗ್ರಾಮ, ಹೊಸಪೇಟೆ |

ಮುಖ್ಯ ವಿಚಾರಣೆ- ಮಾನ್ಯ ಎ. ಪಿ. ಪಿ. ಅವರಿಂದ-

ಸಾಕ್ಷಿ ಕಾರ್ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.- 10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.- 10-ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ 9 ಭಾವಚಿತ್ರದಲ್ಲಿ ತನ್ನನ್ನು ನೋಡಿ ಗುರತಿಸಿರುತ್ತಾರೆ. ಸುಮಾರು ಒಂದು ವರ್ಷದ ಹಿಂದೆ ನಾನು ಹೊಸಪೇಟೆಗೆ ಬೇರೆ ಕೆಲಸಕ್ಕೆ ಎಂದು ಬಂದಾಗ ಆರೋಪಿ ನಂಃ 2 ರವರು ನನಗೆ ಕರೆ ಮಾಡಿ ಸಂಚಾರಿ ಪೊಲೀಸ್ ಠಾಣೆಗೆ ಬರಲು ತಿಳಿಸಿದರು. ನಾನು ಕೃತ್ಯ ಸ್ಥಳಕ್ಕೆ ಹೋಗಿಲ್ಲ ನೇರವಾಗಿ ಠಾಣೆಗೆ ಹೋಗಿದ್ದೆ. ನನ್ನ ಜೊತೆ ಚಾಸಾ 11 ರವರು ಇದ್ದರು. ಸ್ಥಳದಲ್ಲಿ ಇಬ್ಬರು ಪೊಲೀಸ್‌ರು ಹಾಗೂ ಆರೋಪಿ ನಂಃ 2 ರವರು ಸಹ ಇದ್ದರು. ಯಾವ ವಿಚಾರಕ್ಕೆ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಭಾವಚಿತ್ರವನ್ನು ಪೊಲೀಸ್‌ರು ತೆಗೆಸಿದರು. ನನಗೆ ಪಂಚಾನಮೆಯಲ್ಲಿರುವ ಮಾಹಿತಿ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಪ್ರಕರಣದ ವಾಸ್ತವಾಂಶ, ಅಭಿಯೋಜನೆಯ ದಾಖಲೆಗಳು ಹಾಗೂ ಸಾಕ್ಷಿಯ ಹೇಳಿಕೆಯನ್ನು ಪರೀಶಿಲಿಸಿ ಸಕಾರಣ ಕಂಡು ಬಂದಿದ್ದರಿಂದ ಅನುಮತಿಯನ್ನು ನೀಡಲಾಯಿತು.)

ಪಾಟೀಸವಾಲು- ಮಾನ್ಯ ಎ. ಪಿ. ಪಿ. ಅವರಿಂದ-

ದಿನಾಂಕ 18.08.2023 ರಂದು ಅಪಘಾತದಲ್ಲಿ ಭಾಗಿಯಾದ ಕಾರ್ ನ್ನು ಜಪ್ತು ಪಡೆಸಿಕೊಳ್ಳಲು ನನ್ನನ್ನು ಕರೆಸಿದ್ದರು ಎಂದರೆ ನನಗೆ ಅಷ್ಟಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ

ಸಿ. ಸಿ. ನಂ.- **1132/2023**

ಸಿ.ಡಬ್ಲ್ಯೂ.- 12 / ಪಿ.ಡಬ್ಲ್ಯೂ.- 06

ಆರೋಪಿ ನಂಃ 2 ರವರು ಈ ಕಾರ್ ನಲ್ಲಿ ದಿಃ 15.08.2023 ರಂದು ಬೆಳ್ಳಿಗ್ಗೆ 11.30 ಗಂಟೆಗೆ ಅರ್.ಟಿ.ಓ ಚೆಕ್ ಪ್ರೊಸ್ಟ್ ಹತ್ತಿರ ಓವರ್ ಹೆಡ್ ಟ್ಯಾಂಕ್ ಹತ್ತಿರ ವೇಗವಾಗಿ ಕಾರ್ ಚಾಲನೆ ಮಾಡಿಕೊಂಡು ಹೋಗುತ್ತಿರುವಾಗ ಏಕಾಏಕೀ ಒಂದು ನಾಯಿ ಅಡ್ಡ ಬಂದಿದ್ದರಿಂದ ಅವರು ಬೆರೇಕ್ ಹಾಕಿ ನಿಲ್ಲಿಸಿದ್ದರಿಂದ ಹಿಂದೆ ಬರುತ್ತಿದ್ದ ಯಮಹ ವಾಹನದ ಚಾಲಕ ಸದರಿ ಮೊ.ಸೈ ನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನನ್ನ ಕಾರ್ ಗೆ ಹಿಂದಿನಿಂದ ಡಿಕ್ಕಿ ಹೊಡೆದನು ಎಂದು ತಿಳಿಸಿದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಬಿಳಿ ಬಣ್ಣದ ಇನೋವಾ ಕಾರ್ ನಂಃ ಕೆಎ 37 ಎನ್ 7789 ಆಗಿರುತ್ತದೆ ಎಂದರೆ ನನಗೆ ಅಷ್ಟಾಗಿ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸ್‌ರು ಈ ವಾಹನವನ್ನು ಜಪ್ತು ಪಡೆಸಿಕೊಂಡರು ಎಂದರೆ ಪೊಲೀಸ್‌ರು ನನಗೆ ಕರೆದಿದಕ್ಕೆ ಹೋಗಿದ್ದೆ ಎಂದು ನುಡಿಯುತ್ತಾರೆ.

<u>ಪಾಟೀಸವಾಲು- ಆರೋಪಿ ನಂಃ 2 ಪರ ವಕೀಲರಾದ ಶ್ರೀ ಬಿ.ಸಿ.ಎಂ ರವರಿಂದ-</u>

ನಾನು ವ್ಯವಸಾಯ ಮಾಡುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ ಆದರೆ ನನ್ನ ಹೆಸರು ಮಾತ್ರ ಬರೆಯುತ್ತೇನೆ. ಪೊಲೀಸ್‌ರು ಏನು ಬರೆದುಕೊಂಡರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ನಿಪಿ 9 ಭಾವಚಿತ್ರದಲ್ಲಿರುವ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರದಲ್ಲಿ ಕಾಣುವ ಕಾರ್ ನ ಹಿಂಭಾಗದಲ್ಲಿ ಅಂದರೆ ಡಿಕ್ಕಿಯ ಕೆಳಗಿನ ಭಾಗವು ಜಖಂ ಆಗಿಲ್ಲ ಎಂದರೆ ಸರಿ. ಡಿಕ್ಕಿಯ ಮೇಲೆ ಇರುವ ಗಾಜು ಮಾತ್ರ ಹೊಡೆದು ಹೋಗಿದೆ ಎಂದರೆ ಸರಿ. ನನ್ನ ಸಮಕ್ಷಮ ಪೊಲೀಸ್‌ರು ಜಪ್ತು ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.